ಆತ ಏನಾಯಿತೆಂದು ವಿಚಾರಿಸಿ, ‘ಏನು ನಮ್ಮನ್ನು ಹೆದರಿಸಲು ಬಂದಿದ್ದೀರಾ? ನಾನು ನಮ್ಮವರನ್ನು ಕರೆಸಲಾ? ನಮ್ಮ ಹುಡುಗ ಯಾವ ತಪ್ಪು ಮಾಡಿಲ್ಲ. ನೀವೇ ಆಟದಲ್ಲಿ ಮೋಸ ಮಾಡಿದ್ದೀರಿ. ಪುಸ್ತಕ, ಪೆನ್ಸಿಲ್ ಯಾವುದೂ ಕೊಡುವುದಿಲ್ಲ. ಏನು ಮಾಡುತ್ತಿರೋ ಮಾಡ್ಕೊಳ್ಳಿ’ ಎಂದು ಧ್ವನಿ ಏರಿಸಿ ಕಿರುಚಿದ್ದರು.

ಅದೃಷ್ಟಕ್ಕೆ ಆತನ ವ್ಯಾಪಾರಿ ವೃತ್ತಿಯನ್ನು ಬಲ್ಲವನೊಬ್ಬ ಮಂಜನ ತಂಡದಲ್ಲಿದ್ದ. ಅವನು ಅವರ ಭಾಷೆಯಲ್ಲಿ ‘ಅಂಕಲ್, ನಾಳೆ ನಿಮ್ಮ ಹೋಲ್‌ಸೇಲ್ ಕ್ಲಾತ್ ಮಾರ್ಕೆಟ್ಟಿನಲ್ಲಿ ನಿಮ್ಮ ಒಬ್ಬ ಮಗ ಕೊಟ್ಟ ಮಾತಿಗೆ ತಪ್ಪಿ ಮೋಸ ಮಾಡಿದ, ಇನ್ನೊಬ್ಬ ಕಳ್ಳತನ ಮಾಡಿದ ಎಂಬ ಸುದ್ದಿ ಹರಡಿದರೆ ಹೇಗಿರುತ್ತೆ?’ ಎಂದು ಜೋರಾಗಿ ಕೇಳಿದ.


‘ಏನು ಹೋಲ್‌ಸೇಲ್ ಮಾರ್ಕೆಟ್ಟಾ? ನಿನಗೆ ಅಲ್ಲಿ ಯಾರು ಗೊತ್ತು?’ ಆತನ ಧ್ವನಿ ಸ್ವಲ್ಪ ಮೆದುವಾಗಿತ್ತು.

ಅವರನ್ನು ಪ್ರಶ್ನೆ ಮಾಡಿದ ಹುಡುಗ ವಿಜಯದ ನಗೆಬೀರಿ, ‘ಅದೋನಿ ಅಂಕಲ್, ಬಲ್ದುಟಿ ಅಂಕಲ್, ಜಿಂಗಲ್ ಅಂಕಲ್’ ಎನ್ನುವ ರೀತಿಯ ಅಂದಿನ ಹಲವು ಪ್ರಮುಖ ವ್ಯಾಪಾರಿಗಳ ಹೆಸರುಗಳನ್ನು ತೂರಿಬಿಟ್ಟ. ಅದು ರಾಮಬಾಣದಂತೆ ಗುರಿಗೆ ನಾಟಿತ್ತು. ಆತನ ಮಾತಿನ ರೀತಿಯೇ ಬದಲಾಗಿತ್ತು.

‘ಅದೆಲ್ಲ ಯಾಕೆ ಈಗ, ನೀವು ಗೆದ್ದಿರುವುದು ನನಗೆ ಖಚಿತವಾಯಿತು’ ಎಂದು, ತನ್ನ ಮಕ್ಕಳಿಗೆ ಪುಸ್ತಕ ಪೆನ್ಸಿಲ್‌ಗಳನ್ನು ತಂದುಕೊಡಲು ಆಜ್ಞಾಪಿಸಿದ್ದರು. ಅವರು ಪೆಚ್ಚುಮೋರೆ ಹಾಕಿಕೊಂಡು ಅವನ್ನು ತಂದುಕೊಟ್ಟರು. ಮಂಜನ ಕಡೆಯವರು ಹಿಂದಿರುಗಿದಾಗ, ಆತ ತನ್ನ ಮಕ್ಕಳ ಮೇಲೆ ತನ್ನ ಭಾಷೆಯಲ್ಲಿ ಕಿರುಚುತ್ತಿದ್ದ, ‘ಒಂದು ಕೆಲಸವನ್ನು ಸರಿಯಾಗಿ ಮಾಡಲು ಬರುವುದಿಲ್ಲ; ಇನ್ನು ವ್ಯವಹಾರ ಹೇಗೆ ಸಂಭಾಳಿಸುತ್ತೀರಿ!? ಇವತ್ತಿನಿಂದ ನಿಮ್ಮ ಕ್ರಿಕೆಟ್ ಆಟ ಬಂದ್...’ ಒಟ್ಟಿನಲ್ಲಿ ಅಂದು ಕರ್ನಾಟಕಕ್ಕೆ, ಭಾರತಕ್ಕೆ, ಕ್ರಿಕೆಟ್ ಪ್ರಪಂಚಕ್ಕೆ ಬರಬಹುದಾಗಿದ್ದ ಒಬ್ಬ ಒಳ್ಳೆಯ ಆಟಗಾರನ ಅಂತ್ಯವಾಗಿತ್ತು!

ಮಂಜನ ಶಾಲಾದಿನಗಳ ಕ್ರಿಕೆಟ್ ತಂಡದಲ್ಲಿದ್ದ ಹುಡುಗರು ವಿವಿಧ ಹಿನ್ನೆಲೆಗಳ ಕುಟುಂಬಗಳಿಂದ ಬಂದವರು. ಕೆಲವರು ವ್ಯಾಪಾರಿಗಳು, ಹಲವರು ಉದ್ಯಮಿಗಳು, ಕೆಲವರದ್ದು ಸರ್ಕಾರಿ ಕೆಲಸ, ಮತ್ತೆ ಹಲವರದ್ದು ಖಾಸಗಿ ಸಂಸ್ಥೆಗಳ ನೌಕರಿ ಹೀಗೆ. ಜೊತೆಗೆ ಅವರ ಮನೆಯಲ್ಲಿ ಮಾತನಾಡುವ ಭಾಷೆಗಳು ಬೇರೆ ಬೇರೆಯಾಗಿದ್ದವು. ಮಂಜ, ಮುರಳಿ ಇಬ್ಬರದ್ದು ಕನ್ನಡವಾದರೆ, ಉಳಿದವರಲ್ಲಿ ತಮಿಳು, ತೆಲುಗು, ಹಿಂದಿ, ಮರಾಠಿ, ಗುಜರಾತಿ ಹೀಗೆ ಬೇರೆ ಬೇರೆ ಭಾಷೆಯವರು ಜೊತೆಗೂಡಿ ಆಟವಾಡುತ್ತಿದ್ದರು. ಆಟವಾಡುವಾಗ ಅವರೆಲ್ಲರ ಭಾಷೆ ಕನ್ನಡ ಹಾಗೂ ಬಟ್ಲರ್ ಇಂಗ್ಲಿಷ್! ಆದರೆ ಅವರು ಯಾರಿಗೂ ತಾವು ಬೇರೆ ಬೇರೆಯವರು ಎಂಬ ಭಾವನೆಯು ಬಂದೇ ಇರಲಿಲ್ಲ. ಮಂಜನ ಮನೆಯ ಚಕ್ಕುಲಿ ಕೋಡುಬಳೆಗಳಂತೆ ಇತರರ ಮನೆಗಳಿಂದಲೂ ವಿವಿಧ ತಿಂಡಿಗಳು ಆಟದ ಸಮಯದಲ್ಲಿ ಬರುತ್ತಿದ್ದವು. ಆದರೆ ಹೊಸ ಶಾಲೆ, ಬೇರೆಯ ಮನೆ, ಹೊಸ ಕೆಲಸ, ಬೇರೆಯ ಊರಿಗೆ ವರ್ಗ... ಮುಂತಾದ ಕಾರಣಗಳಿಂದ ಆ ತಂಡದ ಸದಸ್ಯರು ಕೆಲವೇ ವರ್ಷಗಳಲ್ಲಿ ಬೇರೆ ಬೇರೆಯಾಗಿ ಹೋಗಿದ್ದರು.

ಇವೆಲ್ಲದರ ಮಧ್ಯೆ ಬೆಂಗಳೂರಿನಲ್ಲೇ ಬೆಳೆದು, ಇಲ್ಲೇ ನೆಲೆಯೂರಿದ್ದ ಮಂಜನಿಗೆ ನಮ್ಮ ಕರ್ನಾಟಕದ ಕ್ರಿಕೆಟ್ ತಂಡದ ಬಗ್ಗೆ ರಕ್ತಗತವಾಗಿ ಬೆಳೆದು ಬಂದ ಹೆಮ್ಮೆ ಹಾಗೂ ಗೌರವ ಇದ್ದೇ ಇತ್ತು. ಹಿಂದಿನ, ಅನಂತರದ ಮತ್ತು ಇತ್ತೀಚಿನ ಕರ್ನಾಟಕದ ಕ್ರಿಕೆಟಿಗರನ್ನು ಕಂಡರೆ ಮಂಜನಿಗೆ ಅವರೆಲ್ಲ ತನ್ನ ನೆರೆಮನೆಯವರೇನೋ ಎನ್ನುವಂತಹ ವಿಶ್ವಾಸವಿತ್ತು. ಐದು ದಿನಗಳ, ಇಲ್ಲ ಮೂರು ದಿನಗಳ ಪಂದ್ಯಗಳು 50 ಓವರ್‌ಗಳಿಗೆ ಇಳಿದಾಗ ಮಂಜನಿಗೆ ಬೇಸರವಾಗಿದ್ದು ನಿಜ. ಆದರೆ ಟುಕು ಟುಕು ಎಂದು ರನ್ನೂ ಮಾಡದೆ, ಔಟೂ ಆಗದೆ, ದಿನವೆಲ್ಲಾ ಆಡುವ ಆಟಕ್ಕಿಂತ 50 ಓವರ್‌ಗಳ ಒಂದು ದಿನದ ಪಂದ್ಯ ರೋಚಕವೆನ್ನಿಸತೊಡಗಿತ್ತು. ಅವನು ಅದನ್ನು ಸವಿಯುವ ಚಟ ಬೆಳೆಸಿಕೊಳ್ಳುವ ವೇಳೆಗೆ ಟ್ವೆಂಟಿ–20 ಪಂದ್ಯಗಳು ಮುನ್ನೆಲೆಗೆ



ಬಂದವು. ಜೊತೆಗೆ ದೇಶದ ಮೆಟ್ರೋಗಳಿಗೆ ಒಂದರಂತೆ, ಕಲಸುಮೇಲೋಗರದ ತಂಡಗಳಿರುವ ಐಪಿಎಲ್ ಕೂಡ ಪ್ರಾರಂಭವಾಗಿಹೋಯಿತು. ಇದರಿಂದ ಮಂಜನಿಗೆ ಒಂದು ರೀತಿ ಭ್ರಮನಿರಸನವಾಗಿಹೋಗಿತ್ತು. ವಿವಿಧ ವಿದೇಶಿ ಹಾಗೂ ವಿವಿಧ ರಾಜ್ಯಗಳ ಆಟಗಾರರ ಜೊತೆ ತನ್ನ ನೆಚ್ಚಿನ ಕರ್ನಾಟಕದ ಆಟಗಾರರು ಬೇರೆ ಬೇರೆ ತಂಡಗಳಲ್ಲಿ ಹರಿದು ಹಂಚಿಹೋಗಿದ್ದರು. ಹಾಗಾಗಿ ಯಾವ ಕ್ರಿಕೆಟ್ ತಂಡವೂ ‘ತನ್ನದು’ ಎಂದುಕೊಳ್ಳುವ ಸ್ವಂತಿಕೆಯ ಭಾವನೆ ಅವನಿಗೆ ಬರಲೇ ಇಲ್ಲ. ಅಷ್ಟು ಸಾಕಾಯಿತು ಐಪಿಎಲ್ ಅವನಿಗೆ ಒಂದಿಷ್ಟೂ ಇಷ್ಟವಾಗದೇ ಹೋಗುವುದಕ್ಕೆ.

‘ಈ ಸಲಿ ಕಪ್ ನಮ್ದೇ!’ ಮುರಳಿ, ಮಂಜನಿಗೆ ಖುಷಿಯಿಂದ ಹೇಳಿದ್ದ. ಮಂಜ ‘ನಮ್ದು ಎಂದರೆ ಯಾರದ್ದು? ನೀನು ಹೇಳುವ ತಂಡದಲ್ಲಿ ನಾಯಕ ನಮ್ಮೂರವನಲ್ಲ; ಔಷಧಿಗೆ ಬೇಕು ಅಂದ್ರೂ ಒಬ್ಬ ಹೇಳಿಕೊಳ್ಳುವಂತಹ ಕನ್ನಡದವನನ್ನು ಆ ತಂಡದಲ್ಲಿ ಇಲ್ಲ! ಇದ್ದರೂ ಆಟಕ್ಕೆ ಇಳಿಸುತ್ತಾರೆ ಎಂಬ ಗ್ಯಾರಂಟಿ ಇಲ್ಲ’ ಎಂದು ವ್ಯಂಗ್ಯವಾಗಿ ಚುಚ್ಚಿದ್ದ.

ಮುರಳಿ ಸ್ವಲ್ಪ ಖಾರವಾಗಿ, ‘ನಮ್ದು ಅಂದರೆ ಬೆಂಗಳೂರಿನ ತಂಡ; ಕರ್ನಾಟಕದ್ದಲ್ಲ’ ಎಂದಾಗ ಮಂಜನಿಗೆ ಅರೆ ಆಘಾತವಾಗಿತ್ತು.

‘ಆದರೂ ಅರ್ಧದಷ್ಟಾದರೂ ಕನ್ನಡಿಗರು ತಂಡದಲ್ಲಿ ಇರಬೇಕಲ್ವೇನೋ?’ ಮಂಜನ ಧ್ವನಿ ಸ್ವಲ್ಪ ದೈನ್ಯವಾಗಿತ್ತು.

“ಬೆಂಗಳೂರಿನಲ್ಲಿ ಹಿಂದೆ ಹೇಗಿತ್ತೋ ಈಗಲೂ ಹಾಗೆ ಇದೆ. ಆಗ ಶಾಲಾದಿನಗಳಲ್ಲೇ ನಮ್ಮ ತಂಡದಲ್ಲಿ ನೀನು, ನಾನು ಬಿಟ್ಟು ಕನ್ನಡದವರು ಇನ್ನು ಯಾರಿದ್ದರು? ನೀನೇ ಯೋಚನೆ ಮಾಡಿನೋಡು. ನಾಲ್ಕು ಗಲ್ಲಿಗಳ ಹುಡುಗರ ತಂಡ ನಮ್ಮದು. ಅದರ ಜೊತೆಗೆ, ಆಗಾಗ ಬೇರೆ ತಂಡದವರು ನಮ್ಮ ಕೆಲವು ಆಟಗಾರರನ್ನು ಕರೆದುಕೊಂಡು ಹೋಗಿ ಅವರ ಆಟಗಾರರ ತರಹ ಪಂದ್ಯದಲ್ಲಿ ಆಡಿಸುತ್ತಾ ಇರ್ಲಿಲ್ವಾ? ಇವತ್ತು ಬೆಂಗಳೂರಿನ ಈ ತಂಡದಲ್ಲೂ ಹಾಗೆ. ಸುಮ್ಮನೆ ‘ಇದು ನಮ್ಮ ಬೆಂಗಳೂರು ತಂಡ’ ಎಂದು ಸಂತೋಷಪಡು; ಇವತ್ತಿನ ದಿನಗಳಲ್ಲಿ ಸಂತೋಷಪಡುವುದಕ್ಕೆ ಕಾರಣಗಳು ಬಹಳ ಕಮ್ಮಿ!”

ಮುರಳಿಯ ಈ ಬೋಧನೆಯಿಂದ ಮಂಜನಿಗೆ ಜ್ಞಾನೋದಯದ ಸನ್ಮಾರ್ಗದ ಬಾಗಿಲು ತೆರೆದುಕೊಂಡಿತ್ತು. ‘ಹಾಗಾದರೆ ಈ ತಂಡ ನಮ್ದೇ!’ ಎಂದು ತನ್ನಷ್ಟಕ್ಕೆ ತಾನು ಹೇಳಿಕೊಂಡ. ರಾತ್ರಿ ಟೀವಿಯಲ್ಲಿ ಬರುವ ಐಪಿಎಲ್ ಆಟಗಳನ್ನು ನೋಡಲು ಪ್ರಾರಂಭಿಸಿದ್ದ.

ಮೊನ್ನೆ ಬೆಂಗಳೂರಿನ ಮೈದಾನದಲ್ಲಿ ಬೆಂಗಳೂರು ತಂಡದ ಎದುರು ನಡೆದ ಪಂದ್ಯದಲ್ಲಿ, ದೆಹಲಿ ತಂಡದಲ್ಲಿದ್ದ ಕನ್ನಡಿಗ ಕೆ.ಎಲ್. ರಾಹುಲ್‌ಗೆ ‘ಶತ್ರುಪಾಳಯದಲ್ಲಿ ಕೆ.ಎಲ್. ರಾಹುಲ್’ ಎಂದು ಪತ್ರಿಕೆಗಳು ಹೆಸರಿಸಿದ್ದು ನೋಡಿ ಮಂಜನಿಗೆ ವಿಪರೀತ ಕಸಿವಿಸಿಯಾಗಿತ್ತು. ‘ಅವನನ್ನು ಬೆಂಗಳೂರಿನ ತಂಡಕ್ಕೆ ಸೇರಿಸಿಕೊಳ್ಳದಿದ್ದರೆ ಅವನು ತಾನೆ ಏನು ಮಾಡಬೇಕು?’ ಎಂದುಕೊಂಡ. ಆ ಪಂದ್ಯದಲ್ಲಿ ಬೆಂಗಳೂರು ತಂಡ ಸೋತಾಗ ವಿಜೃಂಭಿಸಿ ಆಡಿದ್ದ ರಾಹುಲ್, ಮೈದಾನದಲ್ಲಿ ಪಿಚ್ ಪಕ್ಕ ತನ್ನ ಬ್ಯಾಟಿನಿಂದ ಊಹಾತ್ಮಕವಾಗಿ ಒಂದು ವೃತ್ತ ಎಳೆದು, ಅದರ ಮಧ್ಯದಲ್ಲಿ ಬ್ಯಾಟ್‌ನಿಂದ ಕುಟ್ಟಿ, ‘ಈ ಬೆಂಗಳೂರು ಪಿಚ್ ನಂದೇ’ ಎಂದು ಸಾರಿದ್ದು ಭಾವನಾತ್ಮಕವಾಗಿತ್ತು; ‘ಕಾಂತಾರ’ ಸಿನಿಮಾವನ್ನು ಜ್ಞಾಪಿಸಿತ್ತು. ಅದನ್ನು ನೋಡಿ ಬೆರಗಾದ ಮಂಜನಿಗೆ ತನ್ನ ಅಚ್ಚುಮೆಚ್ಚಿನ ಆಟಗಾರನ ತಂಡವೇ ಗೆದ್ದಂತೆ ಒಳಗೊಳಗೇ ಒಂದು ರೀತಿಯ ಅಪರಿಮಿತ ಆನಂದವಾಗಿತ್ತು.

ಇದರಿಂದ ಭಾವುಕನಾದ ಮಂಜ, “ಯಾವ ತಂಡ ಗೆದ್ದರೇನು? ಇಲ್ಲಿ ಸಲ್ಲದ ಕನ್ನಡಿಗ ಕ್ರಿಕೆಟ್ ಆಟಗಾರ ಬೇರೆ ಎಲ್ಲೋ ಸಲ್ಲುವವನಾಗಿರುತ್ತಾನೆ. ಗೆದ್ದ ತಂಡದಲ್ಲಿ ಒಬ್ಬನಾದರೂ ಕನ್ನಡದವನು ಇರುತ್ತಾನೆ; ಚೆನ್ನಾಗಿ ಆಡಿರುತ್ತಾನೆ. ಹಾಗಾಗಿ ‘ಈ ಸಲಿ ಕಪ್ಪು ನ...ಮ್ಮ...ದೇ...!” ಎಂದು ತನಗೆ ತಾನೇ ಖುಷಿಯಿಂದ ಜೋರಾಗಿ ಹೇಳಿಕೊಂಡ. ಹೀಗೆ ಬದಲಾದ ತಂಡಗಳ ಸಂಯೋಜನೆಯನ್ನು ಮನಸಾರೆ ಒಪ್ಪಿಕೊಂಡು, ತನಗೆ ಇಷ್ಟವಾದ ಕ್ರಿಕೆಟ್ಟಿನಿಂದ ನಿರಂತರವಾಗಿ ಸಂತೋಷಪಡಲು ತನ್ನದೇ ಕಾರಣವನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದ.

ಪ್ರತಿಕ್ರಿಯಿಸಿ: **feedback@sudha.co.in**